


ಚಿತ್ರ: ರಂಜು

# ಓ ಮೈ ವ್ಯಾಲೆಂಟೈನ್...

ಪ್ರೇಮಿಗಳ ದಿನಕ್ಕಾಗಿಯೇ ನವನವೀನ ಉಡುಗೆ ತೊಡುಗೆ, ಫ್ಯಾಷನ್ ಆ್ಯಕ್ಸೆಸರೀಸ್‌ಗಳನ್ನು ಗ್ರಾಹಕರಿಗೆ ನೀಡಲು ಫ್ಯಾಷನ್ ವರ್ತಕರು ಸಜ್ಜಾಗಿದ್ದಾರೆ.

■ **ಪವಿತ್ರಾ ರಾಘವೇಂದ್ರ ಶೆಟ್ಟಿ**

ಪ್ರೀತಿಸುವ ಮನಸ್ಸುಗಳು ಕಾತರದಿಂದ ಕಾಯುತ್ತಿರುವ ಪ್ರೇಮಿಗಳ ದಿನಾಚರಣೆ ಬಂದಾಯಿತು. ಹೃದಯದ ತುಂಬಾ ಮಧುರ ಭಾವನೆಯನ್ನು ತುಂಬಿಸಿಕೊಂಡು ಕಣ್ಣಂಚಿನಲ್ಲಿ ಪ್ರೀತಿಯ ಹೂಮಳೆಯನ್ನೇ ಹೊರಸೂಸುವ ಪ್ರೇಮಿಗಳಿಗೆ ಈ ವ್ಯಾಲೆಂಟೈನ್ಸ್ ಡೇ ಎನ್ನುವುದು ಅದ್ಭುತವಾದ ದಿನ. ಪ್ರೇಮ ನಿವೇದನೆ, ಒಂದಷ್ಟು ಪ್ರಾಮಿಸ್, ಒಂದಷ್ಟು ಅಳು, ಒಂದಿಷ್ಟು ನಗು ಎಲ್ಲವೂ ಈ ದಿನದಲ್ಲಿ ಸಮ್ಮಿಳಿತವಾಗಿದೆ.

ಇನ್ನು ಹೊಸದಾಗಿ ಪ್ರೇಮ ನಿವೇದನೆ ಮಾಡಿಕೊಳ್ಳುವವರಿಗಂತೂ ಹೇಗೆ ಡ್ರೆಸ್ ಮಾಡಿಕೊಂಡರೆ ಚೆಂದ, ಯಾವ ಡ್ರೆಸ್ ಈ ದಿನಕ್ಕೆ ಹೆಚ್ಚು ಸರಿಹೊಂದುತ್ತದೆ ಎಂಬುದರ ಬಗ್ಗೆ ಚಿಂತೆ ಕಾಡುತ್ತದೆ. ಇನ್ನು ಕೆಲವರಿಗೆ ಈ ವಿಶೇಷ ದಿನಕ್ಕಾಗಿ ಹೇಗೆ ಮೇಕಪ್ ಮಾಡಿಕೊಳ್ಳುವುದು, ಯಾವ ಶೇಡ್ ಲಿಪ್‌ಸ್ಟಿಕ್ ಚೆನ್ನಾಗಿರುತ್ತೆ... ಹೀಗೆ ಒಂದಷ್ಟು ಗೊಂದಲಗಳು, ಚಡಪಡಿಕೆಗಳು ಪ್ರೇಮಿಗಳ ಹೃದಯದ ತುಂಬಾ ಓಡಾಡುತ್ತಿರುತ್ತದೆ. ಎಲ್ಲಕ್ಕಿಂತ ಹೆಚ್ಚು ತಮ್ಮ ಸಂಗಾತಿಯನ್ನು ಹೇಗೆ ಇಂಪ್ರೆಸ್ ಮಾಡುವುದು ಎಂಬುದರ ಬಗ್ಗೆ ತಲೆಕೆಡಿಸಿಕೊಂಡಿರುತ್ತಾರೆ. ಅಂತವರು ಪ್ರೇಮಿಗಳ ದಿನಕ್ಕೆ ಸರಿಹೊಂದುವಂತಹ ದಿರಿಸುಗಳು, ಮೇಕಪ್ ಆಯ್ಕೆ ಮಾಡಿಕೊಳ್ಳುವುದರ ಮೂಲಕ ತಮ್ಮ ಸಂಗಾತಿಯ ಮನಗೆಲ್ಲಬಹುದು.

ತಮ್ಮ ಸಂಗಾತಿಯ ಮನ ಮೆಚ್ಚಿಸುವುದಕ್ಕೆ ಉಳಿದ ದಿನಗಳಿಗಿಂತ ಈ ದಿನದಂದು ಹೆಚ್ಚು ಮುತುವರ್ಜಿ ವಹಿಸುತ್ತಾರೆ. ಹೆಣ್ಣುಮಕ್ಕಳು ಧರಿಸುವ ಉಡುಪಿನಿಂದ ಹಿಡಿದು ಸ್ಯಾಂಡಲ್ಸ್, ಲಿಪ್‌ಸ್ಟಿಕ್ ಎಲ್ಲದರಲ್ಲೂ ವಿಶೇಷವಾದದ್ದನ್ನೇ ಆಯ್ಕೆ ಮಾಡುತ್ತಾರೆ. ಮಾರುಕಟ್ಟೆಯಲ್ಲಿಯೂ ಕೂಡ ಈ ದಿನಕ್ಕಾಗಿಯೇ ಹೊಸ ಹೊಸ ಉತ್ಪನ್ನಗಳು ಸಿಗಲಿವೆ. ಹುಡುಗರಿಗೂ ಕೂಡ ತಮ್ಮ ಮನದನ್ನೆಯ ಹೃದಯ ಗೆಲ್ಲಲು ವಿಭಿನ್ನ ನೋಟದ ಔಟ್‌ಫಿಟ್‌ಗಳು ಇವೆ. ಪ್ರೇಮಿಗಳ ದಿನದಂದು ಟ್ರೆಂಡ್‌ನಲ್ಲಿರುವ ಉಡುಪು, ಮೇಕಪ್‌ಗಳನ್ನು ಮಾಡಿಕೊಂಡು ಮುದ್ದಾದ ಜೋಡಿಗಳು ಖುಷಿಪಡಬಹುದು.

## ಕ್ಲಾಸಿಕ್ ರೆಡ್ ಮಿಂಚು!

ಪ್ರೇಮಿಗಳ ದಿನದಂದು ಕೆಂಪು ಬಣ್ಣವೇ ಹೆಚ್ಚು ವಿಶೇಷವಾದದ್ದು. ಕೆಂಪು ಗುಲಾಬಿ, ಕೆಂಪು ಬಣ್ಣದ ಡ್ರೆಸ್ ಹೀಗೆ ಕೆಂಪುಬಣ್ಣವೇ ಈ ದಿನದಂದು ಹೆಚ್ಚಿನ ಪಾತ್ರ ವಹಿಸುತ್ತದೆ. ಕ್ಲಾಸಿಕ್ ರೆಡ್ ಹಾಗೂ ಪಿಂಕ್ ಬಣ್ಣವನ್ನೇ ಹಲವರು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಬಣ್ಣದ ಉಡುಪು ಈ ದಿನಕ್ಕೆ ಹೆಚ್ಚು ಸೂಕ್ತವಾಗಿರುತ್ತದೆ. ಅದು ರಾತ್ರಿ ಪಾರ್ಟಿಗೆ ಮತ್ತಷ್ಟು ಕಳೆ ಹೆಚ್ಚಿಸಿ ಪ್ರೇಮಿಗಳ ಹೃದಯದಲ್ಲಿ ಚಿತ್ತಾರ ಮೂಡಿಸುತ್ತದೆ. ಲಾಂಗ್ ಬ್ಯಾಕ್ಲೆಸ್ ಡ್ರೆಸ್ ಗೆ ಹೈ ಹಿಲ್ಸ್ ಹಾಕಿಕೊಂಡು